Presented on : 03-10-2016
Registered on : 03-10-2016
Decided on : --
Duration :

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಕಲೇಶಪುರ.

ಉಪಸ್ಥಿತರು: ಮಹೇಂದ್ರ ಎಂ., ಬಿ.ಎ. ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಕಲೇಶಪುರ.

ದಿನಾಂಕ: **29** ನೇ ಜೂನ್ **2024** ನೇ ಇಸವಿ

ಎಫ್.ಡಿ.ಪಿ. ಸಂಖ್ಯೆ: **03/2016**

**ಅರ್ಜಿದಾರರು** : ಶ್ರೀಮತಿ. ಅಮ್ಮಯ್ಯ ಮತ್ತು ಇತರರು

ವಿರುದ್ಧ

**ಪ್ರತಿವಾದಿಗಳು** : ಶ್ರೀ. ಮಂಜೇಗೌಡ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ. II**

**ಅರ್ಜಿದಾರರು/ಪ್ರಸ್ಥಾಪಿತ ಎದುರುದಾರರು :** ಶ್ರೀಮತಿ. ಭಾಗ್ಯಮ್ಮ
ಕೋಂ ಲೇಟ್ ಹೊನ್ನಪ್ಪಗೌಡ,
ವಯಸ್ಸು 70 ವರ್ಷ,
ವಾಸ : ಮಾಸವಳ್ಳಿ ಗ್ರಾಮ,
ಹಲಸುಲಿಗೆ ಅಂಚೆ,
ಕಸಬಾ ಹೋಬಳಿ,
ಸಕಲೇಶಪುರ ತಾಲ್ಲೂಕು,
ಹಾಸನ ಜಿಲ್ಲೆ.

(**ಪ್ರತಿನಿಧಿಸುವವರು ಶ್ರೀ. ಎಸ್.ಪಿ., ವಕೀಲರು**)

**- ವಿರುದ್ಧ -**

**ಅರ್ಜಿದಾರರು/ಎದುರುದಾರರು :**

1. ಶ್ರೀಮತಿ ಅಮ್ಮಯ್ಯ,
ಕೋಂ ಲೇಟ್ ಗುಂಡೇಗೌಡ,
ವಯಸ್ಕರು,
2. ಶ್ರೀ. ಸಂಜಯ್,
ಬಿನ್ ಲೇಟ್ ಗುಂಡೇಗೌಡ,
ವಯಸ್ಸು 19 ವರ್ಷ,
3. ಶ್ರೀ ಸಚಿನ್,
ಬಿನ್ ಲೇಟ್ ಗುಂಡೇಗೌಡ,
ವಯಸ್ಸು 19 ವರ್ಷ,
ಎಲ್ಲರ ವಾಸ : ಮಾಸವಳ್ಳಿ ಗ್ರಾಮ,
ಹಲಸುಲಿಗೆ ಅಂಚೆ,
ಕಸಬಾ ಹೋಬಳಿ,
ಸಕಲೇಶಪುರ ತಾಲ್ಲೂಕು,
ಹಾಸನ ಜಿಲ್ಲೆ.
ಹಾಲಿ ವಾಸ – ನಂ.410,
ಬಾಲಾಜಿ ನಗರ, ಬೆಂಗಳೂರು.

**(ಪ್ರತಿನಿಧಿಸುವವರು ಶ್ರೀ.ಎಸ್.ವಿ.ಎಸ್., ವಕೀಲರು)**

| | | |
|---|---|---|
| I | *ಯಾವ ಪ್ರಾವಿಧಾನದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ.* | *ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2)* |
| II | *ಯಾವ ಪರಿಹಾರ ಕೋರಲಾಗಿದೆ.* | *ಪಕ್ಷಗಾರರಾಗಿ ಸೇರ್ಪಡೆ ಮಾಡುವಂತೆ ಕೋರಿ* |

| | | |
|---|---|---|
| III | *ಅರ್ಜಿಯನ್ನು ಸಲ್ಲಿಸಿದ ದಿನಾಂಕ* | 17.08.2019 |
| IV | *ಅರ್ಜಿಯ ಸಂಖ್ಯೆ* | *ಮಧ್ಯಂತರ ಅರ್ಜಿ ಸಂಖ್ಯೆ: II* |
| V | *ಅರ್ಜಿಗೆ ತಕರಾರು ಸಲ್ಲಿಸಿದ ದಿನಾಂಕ* | 20.01.2021 |
| VI | *ಆದೇಶವನ್ನು ಹೊರಡಿಸಿದ ದಿನಾಂಕ* | 29.06.2024 |

(ಶ್ರೀ. ಮಹೇಂದ್ರ ಎಂ.)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್. ಸಿ., ಸಕಲೇಶಪುರ.

## ಮಧ್ಯಂತರ ಅರ್ಜಿ ಸಂಖ್ಯೆ. II ರ ಮೇಲಿನ ಆದೇಶ

ಪ್ರಸ್ತಾಪಿತ ಎದುರುದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ.2 ನ್ನು ಸಲ್ಲಿಸಿ ತನ್ನನ್ನು ಈ ಅರ್ಜಿಗೆ ಐದನೇ ಎದುರುದಾರರಾಗಿ ಸೇರ್ಪಡೆ ಮಾಡಬೇಕೆಂದು ಕೋರಿರುತ್ತಾರೆ.

2. ಪ್ರಸ್ತಾಪಿತ ಎದುರುದಾರರು ಈ ಮಧ್ಯಂತರ ಅರ್ಜಿಯ ಜೊತೆ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು ಅದರಲ್ಲಿ ಕಾರಣಗಳನ್ನು ಹೇಳಿರುತ್ತಾರೆ. ಅರ್ಜಿದಾರರು ಮತ್ತು ಎದುರುದಾರರು ಸಂಬಂಧಿಕರಾಗಿರುತ್ತಾರೆ. ಪ್ರಸ್ತಾಪಿತ ಎದುರುದಾರರು ಸಹ ಸದರಿಯವರಿಗೆ ಸಂಬಂಧಿಕರಾಗಿರುತ್ತಾರೆ. ಪ್ರಸ್ತಾಪಿತ ಎದುರುದಾರರ ಪತಿಯಾದ ಹೊನ್ನಪ್ಪಗೌಡರು ದಿನಾಂಕ 29.07.2011 ರಂದು ಮೃತರಾಗಿರುತ್ತಾರೆ. ಸದರಿಯವರಿಗೆ ಎರಡು ಜನ ಪತ್ನಿಯರು ಇದ್ದು, ಮೊದಲನೇ ಪತ್ನಿ ಜಯಮ್ಮ ಪೌತಿಯಾಗಿದ್ದು ನಂತರ ಪ್ರಸ್ತಾಪಿತ ಎದುರುದಾರರನ್ನು ಸದರಿಯವರು ವಿವಾಹವಾಗಿರುತ್ತಾರೆ. ಸದರಿಯವರ ದಾಂಪತ್ಯ ಜೀವನದಿಂದ ನಾಲ್ಕು ಜನ ಮಕ್ಕಳಿದ್ದು ಅವರುಗಳೆಂದರೆ ಮಂಜೇಗೌಡ, ಕಂಬೇಗೌಡ, ಗುಂಡೇಗೌಡ ಮತ್ತು ರುಕ್ಮಿಣಿಯಾಗಿರುತ್ತಾರೆ. ಇವರಲ್ಲಿ 3 ನೇ ಮಗ ಗುಂಡೇಗೌಡ ದಿನಾಂಕ 26.08.1989

ರಂದು ಮೃತರಾಗಿರುತ್ತಾರೆ. ಗುಂಡೇಗೌಡ ಮತ್ತು ಅಮ್ಮಯ್ಯರವರ ದಾಂಪತ್ಯದಿಂದ ಸಂಜಯ್ ಮತ್ತು ಸಚಿನ್ ಎಂಬ ಇಬ್ಬರು ಮಕ್ಕಳು ಜನಿಸಿರುತ್ತಾರೆ. ಎರಡನೇ ಪತ್ನಿಯಾದ ಪ್ರಸ್ತಾಪಿತ ಎದುರುದಾರರ ಮೂಲಕ ಬೂದೇಶ ಎಂಬ ಮಗ ಜನಿಸಿರುತ್ತಾರೆ. ಸದರಿ ಗುಂಡೇಗೌಡರ ಪತ್ನಿಯಾದ ಅಮ್ಮಯ್ಯರವರು ಈ ಅರ್ಜಿಯಲ್ಲಿ 1 ನೇ ಅರ್ಜಿದಾರರು ಆಗಿದ್ದು ಸಂಜಯ್ ಮತ್ತು ಸಚಿನ್‌ರವರು ಎರಡು ಮತ್ತು ಮೂರನೇ ಅರ್ಜಿದಾರರಾಗಿರುತ್ತಾರೆ.

3. ಈ ಮೇಲೆ ಹೇಳಿದ ಅರ್ಜಿದಾರರು ಎದುರುರಾರರ ವಿರುದ್ದ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ :49/2013 ರ ಪ್ರಕಾರ ಭಾಗಾಂಶಕ್ಕಾಗಿ ದಾವೆ ಸಲ್ಲಿಸಿದ್ದು, ಅದರಲ್ಲಿ ಪ್ರಸ್ತಾಪಿತ ಎದುರುದಾರರನ್ನು ಪಕ್ಷಗಾರರನ್ನಾಗಿ ಮಾಡದೇ ಕೈ ಬಿಟ್ಟಿರುತ್ತಾರೆ. ಪ್ರಸ್ತಾಪಿತ ಎದುರುದಾರರ ಪತಿಯ ಪಿತ್ರಾರ್ಜಿತ ಸ್ವತ್ತಿನಲ್ಲಿ ಪ್ರಸ್ತಾಪಿತ ಎದುರುದಾರರಿಗೂ ಸಮಾನ ಹಕ್ಕು ಇರುತ್ತದೆ. ಪ್ರಸ್ತಾಪಿತ ಎದುರುದಾರರ ಪತಿಯು ದಿನಾಂಕ :13.06.2011 ರಂದು ನೊಂದಾಯಿತ ಮರಣ ಶಾಸನವನ್ನು ಮಾಡಿದ್ದು, ಅದರ ಪ್ರಕಾರ ಪಿತ್ರಾರ್ಜಿತ ಸ್ವತ್ತುಗಳನ್ನು ತನ್ನ ಮಕ್ಕಳಿಗೂ ಮತ್ತು ಪ್ರಸ್ತಾಪಿತ ಎದುರುದಾರರಿಗೂ ಹಂಚಿಕೆ ಮಾಡಿರುತ್ತಾರೆ. ಅರ್ಜಿದಾರರು ಅದನ್ನು ಮರೆಮಾಚಿ ಈ ಮೇಲೆ ಹೇಳಿದ ದಾವೆಯನ್ನು ಸಲ್ಲಿಸಿದ್ದರು. ಪ್ರಸ್ತಾಪಿತ ಎದುರುದಾರರು ಜೀವನ ನಡೆಸಲು ಕಷ್ಟವಾಗಿರುತ್ತದೆ. ಮರಣ ಶಾಸನದಲ್ಲಿ ಹೇಳಿದ ಸ್ವತ್ತಿಗೆ ಪ್ರಸ್ತಾಪಿತ ಎದುರುದಾರರು ಮಾಲೀಕರಾಗಿರುತ್ತಾರೆ. ಅರ್ಜಿದಾರರು ಬೆಂಗಳೂರಿನಲ್ಲಿ ವಾಸವಾಗಿದ್ದು ಅಂತಿಮ ಡಿಕ್ರಿಯನ್ನು ಪಡೆದುಕೊಂಡು ಅರ್ಜಿ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡುವ ಪ್ರಯತ್ನದಲ್ಲಿರುತ್ತಾರೆ. ಆದ್ದರಿಂದ ಪ್ರಸ್ತಾಪಿತ ಎದುರುದಾರರನ್ನು ಈ ಅರ್ಜಿಯಲ್ಲಿ ಪಕ್ಷಗಾರರಾಗಿ ಮಾಡುವುದು ಅಗತ್ಯವಾಗಿರುತ್ತದೆ. **ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.**

4. ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ. 2 ಕ್ಕೆ ತಮ್ಮ ತಕರಾರನ್ನು ಸಲ್ಲಿಸಿದ್ದು ಅದರಲ್ಲಿ ಪ್ರಸ್ತಾಪಿತ ಎದುರುದಾರರು ಸಲ್ಲಿಸಿರುವ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು ಆದ್ದರಿಂದ ವಜಾಗೊಳಿಸಬೇಕೆಂದು

ಕೋರಿರುತ್ತಾರೆ. ಈ ದಾವೆಯ ವಿದ್ಯಾಮಾನಗಳು ಪ್ರಾರಂಭಗೊಂಡು 8 ವರ್ಷಗಳು ಕಳೆದಿದ್ದು ವಿಳಂಬವಾಗಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅಂತಿಮ ಡಿಕ್ರಿಯನ್ನು ಕೋರಿ ಸಲ್ಲಿಸಿದ ಈ ಅರ್ಜಿಯಲ್ಲಿ ಪ್ರಸ್ತಾಪಿತ ಎದುರುದಾರರನ್ನು ಪಕ್ಷಗಾರರನ್ನಾಗಿ ಮಾಡಲು ಅವಕಾಶ ಇರುವುದಿಲ್ಲ. ಪ್ರಸ್ತುತ ಅರ್ಜಿಯಲ್ಲಿ ಈಗಾಗಲೇ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿದ್ದು, ಅವರು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ನಂತರ ಪ್ರಸ್ತಾಪಿತ ಎದುರುದಾರರು ಪ್ರಸ್ತುತ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಕಾಲ ವಿಳಂಬ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. **ಈ ಎಲ್ಲಾ ಕಾರಣಗಳಿಂದ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.**

**5.** ಈ ಮಧ್ಯಂತರ ಅರ್ಜಿಯನ್ನು ತೀರ್ಮಾನಿಸಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

## ಅಂಶಗಳು

1. ಈ ಅರ್ಜಿಯನ್ನು ಪರಿಣಾಮಕಾರಿಯಾಗಿ ತೀರ್ಮಾನ ಮಾಡಲು ಪ್ರಸ್ತಾಪಿತ ಎದುರುದಾರರ ಉಪಸ್ಥಿತಿ ಅಗತ್ಯ ಇದೆಯೇ ?
2. ಮಾಡುವ ಆದೇಶ ಏನು ?

6. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

7. ಈ ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶ ಸಂಖ್ಯೆ 1 : ನಕಾರಾತ್ಮಕವಾಗಿ**

**ಅಂಶ ಸಂಖ್ಯೆ 2 : ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ**

## ಕಾರಣಗಳು

**8. ಅಂಶ ಸಂಖ್ಯೆ 1** : ಪ್ರಸ್ತಾಪಿತ ಎದುರುದಾರರ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ತನ್ನನ್ನು ಈ ಅರ್ಜಿಯಲ್ಲಿ ಎದುರುದಾರರನಾಗಿ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ. ಸದರಿ ಅರ್ಜಿಗೆ ಅರ್ಜಿದಾರರು ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಅಂತಿಮ ಡಿಕ್ರಿಯ ಅರ್ಜಿಯನ್ನು ಅಸಲು ದಾವಾ ಸಂಖ್ಯೆ : 49/2013 ರ ಪ್ರಾಥಮಿಕ ಡಿಕ್ರಿಯ ಪ್ರಕಾರ ಅಂತಿಮ ಡಿಕ್ರಿಗಾಗಿ ಸಲ್ಲಿಸಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಈಗಾಗಲೇ ನ್ಯಾಯಾಲಯದ ನಿಯೋಗಿಯ ವರದಿಯು ಬಂದಿದ್ದು ಸದರಿ ವರದಿಗೆ ಅರ್ಜಿದಾರರ ಪರ ವಕೀಲರು ತಮ್ಮ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಎದುರುದಾರರು ಸದರಿ ವರದಿಗೆ ತಮ್ಮ ತಕರಾರನ್ನು ಸಲ್ಲಿಸಿರುವುದಿಲ್ಲ.

9. ಪ್ರಸ್ತಾಪಿತ ಎದುರುದಾರರ ಪ್ರಕಾರ ತನ್ನ ಪತಿಯು ತನಗೆ ಮತ್ತು ತನ್ನ ಮಕ್ಕಳಿಗೆ ನೊಂದಾಯಿತ ಮರಣ ಶಾಸನವನ್ನು ದಿನಾಂಕ 13.06.2011 ರಂದು ಮಾಡಿರುತ್ತಾರೆ ಎಂಬುವುದಾಗಿರುತ್ತದೆ. ಅದರೆ ಸದರಿ ನೊಂದಾಯಿತ ವುರಣ ಶಾಸನ ಪತ್ರವನ್ನು ಪ್ರಸ್ತಾಪಿತ ಎದುರುದಾರರು ಹಾಜರು ಪಡಿಸಿರುವುದಿಲ್ಲ. ಆದೇ ರೀತಿ ಪ್ರಸ್ತಾಪಿತ ಎದುರುದಾರರು ತಾನು ನಾಲ್ಕನೇ ಎದುರುರಾರರ ತಾಯಿ ಎಂದು ತಿಳಿಸಿರುತ್ತಾರೆ. ಸದರಿ ಸಂಗತಿಯನ್ನು ಅರ್ಜಿದಾರರಾಗಲಿ ಅಥವಾ ಬೇರೆ ಯಾರೇ ಆಗಲಿ ಅಲ್ಲಗಳೆದಿರುವುದಿಲ್ಲ. 4 ನೇ ಎದುರುದಾರರು ಪಡೆದ ಹಿಸ್ಸೆಯಲ್ಲಿ ಪ್ರಸ್ತಾಪಿತ ಎದುರುದಾರರು ಸಹ ಹಿಸ್ಸೆಯನ್ನು ಹೊಂದಿರುತ್ತಾರೆ. ಅದ್ದರಿಂದ ಪ್ರಸ್ತಾಪಿತ ಎದುರುದಾರರು ಈ ಮುಖ್ಯ ಅರ್ಜಿಯಲ್ಲಿ ಅವಶ್ಯಕ ಪಕ್ಷಗಾರರು ಆಗಿರುವುದಿಲ್ಲ. ಈಗಾಗಲೇ ವಿಚಾರಣೆ ಮುಗಿದು ದಿನಾಂಕ 02.01.2016 ರಂದು ತೀರ್ಪು ಆಗಿರುತ್ತದೆ. ಪ್ರಸ್ತಾಪಿತ ಎದುರುದಾರರು ಸಲ್ಲಿಸಿರುವ ಪ್ರಸ್ತುತ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಸದರಿ ಅರ್ಜಿಯು ವಜಾಗೊಳ್ಳಲು ಯೋಗ್ಯವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯ

**ಪಟ್ಟು ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.**

**10.** **ಅಂಶ ಸಂಖ್ಯೆ 2** ಈ ಮೇಲ್ಕಂಡ ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಃ ಃ ಆದೇಶ ಃ ಃ**

**ಪ್ರಸ್ತಾಪಿತ ಎದುರುದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ.II ನ್ನು ವಜಾಗೊಳಿಸಲಾಗಿದೆ.**

**ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.**

(ಶೀಘ್ರಲಿಪಿಗಾರರಿಗೆ ತೀರ್ಪನ್ನು ನೇರವಾಗಿ ಉಕ್ತಲೇಖನ ನೀಡಿದ್ದು, ಅವರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ನಂತರ ಅದನ್ನು ಪರಿಶೀಲಿಸಿ, ಸಹಿಯನ್ನು ಮಾಡಿ ಈ ದಿನ **29 ನೇ ಜೂನ್ 2024** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಮಹೇಂದ್ರ ಎಂ.)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಸಕಲೇಶಪುರ.**